

ಹಳೆಯ ಜಿರಾಕ್ಸ್ ಪ್ರತಿಯಂತೆ ಕಂಡಿದ್ದರು. ಅವನಮ್ಮ ಚಡ್ಡಿ ಹಾಕಿಕೊಂಡು ಕೂದಲು ಕತ್ತರಿಸಿಕೊಂಡಿದ್ದರು. ಅಂತಹ ದಿರಸಿನ ಹೆಂಗಸನ್ನು ನಾನು ಅದೇ ಮೊದಲು ನೋಡಿದ್ದು. ಅವರಿಬ್ಬರೂ ಪಾಶ್ಚಿಮಾತ್ಯ ಉಡುಪುಗಳನ್ನು ಧರಿಸಿದ್ದರಲ್ಲದೆ, ನಮ್ಮೆಲ್ಲಾ ತಂದೆ ತಾಯಿಗಳಿಗಿಂತಲೂ ಬಹಳ ಭಿನ್ನವಾಗಿದ್ದರು. ರಿಚಿಯು ನಮ್ಮನ್ನೆಲ್ಲಾ ಅವರಿಗೆ ಮೊದಲ ಬಾರಿ ಪರಿಚಯಿಸಿದಾಗ, "ಹ್ಞುಂ... ಸರಿ. ನಿಮ್ಮ ಕೋಣೆಗೆ ಹೋಗಿ, ಗದ್ದಲ ಮಾಡದಂಗೆ ಆಡಿಕೊಳ್ಳಿ" ಎಂದಿದ್ದರು. ಕುತೂಹಲಕ್ಕಾದರೂ ನಮ್ಮ ಅಪ್ಪಅಮ್ಮರ ಬಗ್ಗೆ ಕೆದಕಿ ಪ್ರಶ್ನೆ ಕೇಳುವದಾಗಲಿ, ಇತರ ರೀತಿನೀತಿಯ ಬಗ್ಗೆಯಾಗಲೀ ಅವರು ಮಾತಾಡಿರಲಿಲ್ಲ.

ಜಗತ್ತಿನ ಮೂಲೆಮೂಲೆಗಳಿಂದ ತಂದ ವಸ್ತುಗಳಿಂದ ಅವರ ಮನೆ ತುಂಬಿರುತ್ತಿತ್ತು. ಅವಗಳನ್ನು ಅತ್ಯಂತ ಉತ್ಸಾಹದಿಂದ ನಮಗೆ ರಿಚಿ ಪರಿಚಯಿಸುತ್ತಿದ್ದ. ಇಂಪೋರ್ಟೆಡ್ ಸಿರಾಮಿಕ್ ತಟ್ಟೆಗಳು, ಜಪಾನಿನ ಬೀಸಣಿಗೆ, ರಷ್ಯಾದ ಗೊಂಬೆಗಳು, ಮೂರ್ತಿಗಳು ಮತ್ತು ಆಭರಣಗಳು... ಅವನ ಟವೆಲು ಮತ್ತು ಹಾಸಿಗೆಗಳೂ ಸಿಂಗಪುರದಿಂದ ಆಮದು ಮಾಡಿಕೊಂಡವಾಗಿದ್ದವು.

ನಮ್ಮ ಮನೆಗಳಿಗೆ ಹೋಲಿಸಿದರೆ ಇದು ಪೂರ್ತಿ ವಿಭಿನ್ನವಾಗಿತ್ತು. ನಮ್ಮಲ್ಲಿ ಗೋಡೆಯ ಮೇಲೆ ಲಕ್ಷ್ಮಿ ಅಥವಾ ಕೃಷ್ಣ ಇರುವ ಹಳೆಯ ಕ್ಯಾಲೆಂಡರ್‌ಗಳು, ಮಾಮೂಲೀ ಸ್ಟೀಲ್ ಪಾತ್ರೆಗಳು ಮತ್ತು ಒಂದು ಲಡಕಾಸಿ ರೇಡಿಯೊ ಇದ್ದವು. ರಜೆಯ ದಿನವೆಂದರೆ ಬಂಧುಬಳಗದ ಮನೆಗೆ ಹೋಗುತ್ತಿದ್ದೆವೇ ಹೊರತು, ಸೈಟ್ ಸೀಯಿಂಗ್ ಎನ್ನುವ ಸಂಗತಿಯೇ ಗೊತ್ತಿರಲಿಲ್ಲ. ನಮ್ಮ ಜೀವನ ರಿಚಿಯ ಮನೆಯಂತೆ ಇರಲೇ ಇಲ್ಲ.

ರಿಚಿ, ಅವನ ಮನೆ, ಅವನ ಅಪ್ಪಅಮ್ಮ – ಎಲ್ಲವನ್ನೂ ಕಂಡು ನಾನು ಬೆರಗಾಗಿ ಹೋಗಿದ್ದೆ. ರಿಚಿಗೆಂದೇ ಒಂದು ನಾಜೂಕಾದ ಟುಇನ್‌ಒನ್ ಟೇಪ್‌ರಿಕಾರ್ಡರ್ ಅವನ ಕೋಣೆಯಲ್ಲಿತ್ತು. ನಾವೆಲ್ಲರೂ ಸೇರಿದಾಗ ಅವನು ಕಮಲ ಹಾಸನ್ ಹಾಡನ್ನು ಹಾಕಿ, ಕಮಲ್ ಸಿನಿಮಾದಲ್ಲಿ ನರ್ತಿಸಿದ ರೀತಿಯಲ್ಲಿಯೇ ನೃತ್ಯ ಮಾಡುತ್ತಿದ್ದ. ಅವನ ನಡೆಯನ್ನೇ ಅನುಕರಿಸುತ್ತಾ, ಸಂಜೀವ್ ಮತ್ತಿತರರು ನರ್ತಿಸುತ್ತಿದ್ದರು. ನೃತ್ಯದಿಂದ ಸುಸ್ತಾಗಿ ಎಲ್ಲೆಂದರಲ್ಲಿ ಕುಳಿತಾಗ ಸಾಕಷ್ಟು ಹರಟೆ ಹೊಡೆಯುತ್ತಿದ್ದರು. ಅವರು ಆಡುತ್ತಿದ್ದ ಮಾತುಗಳು ನನಗೆ ಹೆಚ್ಚಾಗಿ ತಿಳಿಯುತ್ತಲೇ ಇರಲಿಲ್ಲ – ಬೇರೆ ನಗರದಲ್ಲಿನ ಜನಜೀವನ, ಕಡಲ ತೀರಗಳು, ಇಂಗ್ಲಿಷ್ ಸಿನಿಮಾಗಳು ಇತ್ಯಾದಿ. ಒಮ್ಮೊಮ್ಮೆ ನಾನು ಬಾಯಿ ಹಾಕುತ್ತಿದ್ದೆ. ಆಗ ಅವರೆಲ್ಲಾ ನನ್ನನ್ನು ರೇಗಿಸುತ್ತಿದ್ದರು.

ನನಗೆ ನಿಜಕ್ಕೂ ರಿಚಿ ಇಷ್ಟವಾಗುತ್ತಿದ್ದ. ಅವನ ಸುತ್ತಲೂ ಸುಳಿದಾಡಿಕೊಂಡಿರುವುದೇ ಸಂಭ್ರಮದ ಸಂಗತಿಯಾಗಿತ್ತು. ಸಂಜೀವನೂ ನನಗೆ ಸೇರುತ್ತಿದ್ದ, ಆದರೆ ರಿಚಿ ಮಾತ್ರ ಹೆಚ್ಚು ಇಷ್ಟವಾಗುತ್ತಿದ್ದ. ಅದರಲ್ಲಿ ಅನುಮಾನವೇ ಇಲ್ಲ.

ಒಮ್ಮೊಮ್ಮೆ ಯಾರೂ ಇಲ್ಲದಾಗಲೂ ಸಹಿತ ನಾನು ರಿಚಿಯ ಜೊತೆಯಲ್ಲಿಯೇ ಇರುತ್ತಿದ್ದೆ. ಅವನ ಬಳಿ ಸಾಕಷ್ಟು ಕಾಮಿಕ್ಸ್ ಪುಸ್ತಕಗಳು ಇದ್ದವು – ಅಮರ ಚಿತ್ರ ಕತೆ, ಇಂದ್ರಾಜಾಲ ಕಾಮಿಕ್ಸ್; ಟಿನ್‌ಟಿನ್ ಕೂಡಾ ಇರುತ್ತಿತ್ತು. ನನ್ನ ಮನೆಗೆ ತೆಗೆದುಕೊಂಡು ಹೋಗಲು ಕೊಡುತ್ತಿರಲಿಲ್ಲವಾದರೂ, ಅವನ ಮನೆಯಲ್ಲಿಯೇ ಕುಳಿತು ಓದಲು ರಿಚಿ ಒಪ್ಪಿಗೆ ಕೊಟ್ಟಿದ್ದ.

ನಾವಿಬ್ಬರೇ ಇದ್ದಾಗ ಅವನು ಯಾವುದಾದರೂ ಹಾಡನ್ನು ಹಾಕಿ ಪುಸ್ತಕವೊಂದನ್ನು ಹಿಡಿದು ಕುಳಿತರೆ, ನಾನು ಕಾಮಿಕ್ಸ್ ಓದುವದರಲ್ಲಿ ತಲ್ಲೀನನಾಗುತ್ತಿದ್ದೆ. ಅವನು ಹಾಸಿಗೆಯಲ್ಲಿ ಮಲಗಿಕೊಂಡು ಪುಸ್ತಕ ಓದುವಾಗ ಮೊಣಕಾಲನ್ನು ಮಡಚಿ ನಿಲ್ಲಿಸುತ್ತಿದ್ದ. ಆ ಕಾಲಿಗೆ